# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 314/2015 ಸಿಡಬ್ಲೂ: 6 ಪಿಡಬ್ಲೂ: 8

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ಕಿಶನ್ ರಾಥೋಡ್

ತಂದೆ ಹೆಸರು : ರೂಪಲಾ ರಾಥೋಡ್

ವಯಸ್ಸು : 68 ವರ್ಷ

ಉದ್ಯೋಗ : ನಿವೃತ್ತ ಶಿಕ್ಷಕರು

ವಾಸಸ್ಥಳ : ಚಿತ್ತಾಪುರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1, 4, 5, 7 ಮತ್ತು 8 ನನಗೆ ಗೊತ್ತು. ಸನ್ 2013 ರಲ್ಲಿ ದಿನಾಂಕ ನೆನಪಿಲ್ಲ, ಬಿಲಕಲ್ಲು ಗ್ರಾಮಕ್ಕೆ ಭೇಟಿ ನೀಡಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಎರಡು ರೂಂ ಮತ್ತು ಡ್ಯೂಯಲ್ ಡೆಸ್ಕ ಮಂಜೂರಾತಿಯಾಗಿದ್ದು ಅದಕ್ಕೆ ರೂ.11,00,000/- ಹಣ ಬಿಡುಗಡೆಯಾಗಿತ್ತು. JEE ರವರು ಸದರಿ ಕಾಮಗಾರಿಯಲ್ಲಿ ಕೇವಲ ರೂ.4,00,000/- ಗಳು ಉಪಯೋಗಿಸಿದ್ದಾರೆ ಮತ್ತು ಇನ್ನುಳಿದ ರೂ.6,00,000/- ಗಳನ್ನು ಆರೋಪಿತರು ದುರುಪಯೊಗ ಪಡಿಸಿದ್ದಾರೆ ಎಂದು ವರದಿ ನೀಡಿದರು. ಆಗ ನಾನು ಈ ಬಗ್ಗೆ ಚಾ ಸಾ 1 ರವರಿಗೆ ವರದಿ ನೀಡಿದ್ದು. ಸದರಿ ಮಂಜೂರಾತಿ ಹಣವನ್ನು ಜಂಟಿ ಖಾತೆಗೆ ಜಮಾ ಆಗಿದ್ದು. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಆಗ SDMC ಅಧ್ಯಕ್ಷರಾಗಿದ್ದರು. ಸದರಿ ಜಂಟಿ ಖಾತೆಯನ್ನು ಸೇಡಂ ಶಾಖೆಯ ಕೆ ಜಿ ಬಿ ಬ್ಯಾಂಕ್ ನಲ್ಲಿತ್ತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ. ನಮ್ಮ ಜೊತೆ ಯಾರು ಬಂದಿದ್ದರು ನನಗೆ ಗೊತ್ತಿಲ್ಲ. JEE ರವರ ವರದಿ ನೋಡಿ ನಾನು ಹಣ ಕಾಸಿನ ದುರುಪಯೋಗ ಪಡಿಸಿರುವ ಬಗ್ಗೆ ಹೇಳಿದ್ದೇನೆ ಎಂದರೆ ಸರಿ. JEE ರವರು ನನ್ನ ಸಮಕ್ಷಮ ಯಾವುದೇ estimate ಮಾಡಿಲ್ಲ. ಎಷ್ಟು ಹಣ ಜಮಾ

ಆಗಿದೆ ಎಂದು ನಾನು ಖುದ್ದು ನೋಡಿದ್ದೇನೆ. ಯಾವ ದಿನಾಂಕದಂದು ಜಮಾ ಆಗಿದ್ದು ನನಗೆ ಗೊತ್ತಿಲ್ಲ ಆದರೆ ಸನ್ 2013 ರಲ್ಲಿ ಜಮಾ ಆಗಿದ್ದು.

ಬಿಲಕಲ್ಲು ಗ್ರಾಮಕ್ಕೆ ಭೇಟಿ ನೀಡಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಎರಡು ರೂಂ ಮತ್ತು ಡ್ಯೂಯಲ್ ಡೆಸ್ಕ ಮಂಜೂರಾತಿಯಾಗಿದ್ದು ಅದಕ್ಕೆ ರೂ.11,00,000/- ಹಣ ಬಿಡುಗಡೆಯಾಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. JEE ರವರು ಸದರಿ ಕಾಮಗಾರಿಯಲ್ಲಿ ಕೇವಲ ರೂ.4,00,000/- ಗಳು ಉಪಯೋಗಿಸಿದ್ದಾರೆ ಮತ್ತು ಇನ್ನುಳಿದ ರೂ.6,00,000/- ಗಳನ್ನು ಆರೋಪಿತರು ದುರುಪಯೊಗ ಪಡಿಸಿದ್ದಾರೆ ಎಂದು ವರದಿ ನೀಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಈ ಬಗ್ಗೆ ಚಾ ಸಾ 1 ರವರಿಗೆ ವರದಿ ನೀಡಿದ್ದು. ಸದರಿ ಮಂಜೂರಾತಿ ಹಣವನ್ನು ಜಂಟಿ ಖಾತೆಗೆ ಜಮಾ ಆಗಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಆಗ SDMC ಅಧ್ಯಕ್ಷರಾಗಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಜಂಟಿ ಖಾತೆಯನ್ನು ಸೇಡಂ ಶಾಖೆಯ ಕೆ ಜಿ ಬಿ ಬ್ಯಾಂಕ್ ನಲ್ಲಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

SSA (Sarva Shikshana Abiyana report) ವರದಿ ನನ್ನ ಸಮಕ್ಷಮ ಆಗಿಲ್ಲ. ನಾನು ನಮ್ಮ ಇಲಾಖೆಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ಯಾವುದೇ ಹಣವನ್ನು ದುರುಪಯೋಗ ಪಡಿಸಿಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 314/2015 ಸಿಡಬ್ಲೂ: 7 ಪಿಡಬ್ಲೂ: 9

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ನಿಂಗಣ್ಣ

ತಂದೆ ಹೆಸರು : ಗೊಲ್ಲಾಳಪ್ಪ

ವಯಸ್ಸು : 50 ವರ್ಷ

ಉದ್ಯೋಗ : ಅಕ್ಷರ ದಾಸೋಹ ಯೋಜನೆ ಸಹಾಯಕ ನಿರ್ದೇಶಕರು, ಅಫಜಲ್ ಪುರ

ವಾಸಸ್ಥಳ : ಅಫಜಲ್ ಪುರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ಸನ್ 2011 ರಿಂದ 2015 ರ ವರೆಗೆ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿಯಾಗಿ (ಬಿ ಆರ್ ಪಿ) ಸೇವೆಯನ್ನು ಸಲ್ಲಿಸಿರುತ್ತೇನೆ.

ಚಾ ಸಾ 1, 4 ರಿಂದ 6 ಮತ್ತು 8 ನನಗೆ ಗೊತ್ತು. 15-01-2013 ರಂದು ನಾನು ಮತ್ತು ಚಾ ಸಾ 5 ರವರು ಕೂಡಿಕೊಂಡು ಬಿಲಕಲ್ಲು ಗ್ರಾಮದಲ್ಲಿ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ್ದೆವು. ಅಲ್ಲಿ ಒಂದು ಕಟ್ಟಡ ನಿರ್ಮಾಣ ವಾಗುತ್ತಿದ್ದೆ ಅದರ ಬಗ್ಗೆ ಪ್ರಗತಿ ವರದಿಯನ್ನು ನೀಡುವಂತೆ ಚಾ ಸಾ 1 ರವರು ಕೇಳಿದರು. ಅವರ ಆದೇಶದ ಮೇರೆಗೆ ಅಲ್ಲಿ ಹೋಗಿ ನೋಡಲಾಗಿ ಪ್ರಭಾರಿ ಮುಖ್ಯ ಗುರುಗಳಾದ ರಾಜು ಟಿ ಮತ್ತು ಇತರ ಸಹ ಶಿಕ್ಷಕರು ಹಾಜರಿದ್ದರು. ಮುಖ್ಯವಾಗಿ ನಾವು ಕಟ್ಟಡವನ್ನು ನೋಡಿದಾಗ ಕಟ್ಟಡ ಸಂಪೂರ್ಣವಾಗಿ ಆಗಿರಲಿಲ್ಲ ಮತ್ತು ಡುಯಲ್ ಡೆಸ್ಕ ತರಲು ಹಣ ಹಾಕಿದ್ದರು. ಅದನ್ನು ಸಹ ಖರೀದಿ ಮಾಡಿರಲಿಲ್ಲ. ಈ ಬಗ್ಗೆ ನಮಗೆ ಅಲ್ಲಿನ ಪ್ರಭಾರಿ ಮುಖ್ಯ ಗುರುಗಳಾದ ರಾಜು ಟಿ ರವರು ಮಾಹಿತಿ ತಿಳಿಸಿದರು. ರೂ.11,00,375/- ಒಟ್ಟಾರೆಯಾಗಿ ಮುಂಜೂರಾತಿಯಾಗಿತ್ತು. ಸದರಿ ಮಂಜೂರಾತಿ ಹಣವನ್ನು 1 ಮತ್ತು 2 ನೇ ಆರೋಪಿತರ ಜಂಟಿ ಖಾತೆಗೆ ಜಮಾ ಆಗಿದ್ದು. ಅದರಲ್ಲಿ ಕೇವಲ ರೂ.4,00,000/- ಗಳು ಮಾತ್ರ ಖರ್ಚು ಆಗಿದ್ದು ಹಾಗು ಇನ್ನುಳಿದ ರೂ.6,00,000/- ಗಳು ಗೋಲ್ ಮಾಲ್ ಆಗಿದೆ. ಈ ಬಗ್ಗೆ ನಾನು ಮತ್ತು ಚಾ ಸಾ 5 ರವರು ಚಾ ಸಾ 1 ರವರಿಗೆ ವರದಿ ನೀಡಿದ್ದೆವು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ನಾನು ಮತ್ತು ಚಾ ಸಾ 5 ರವರು ಚಾ ಸಾ 1 ರವರಿಗೆ ಲಿಖಿತ ವರದಿಯನ್ನು ನೀಡಿದ್ದೆವು. ಸದರಿ ವರದಿಯನ್ನು ನಾನು ಮತ್ತು ಚಾ ಸಾ 5 ರವರು ಜಂಟಿಯಾಗಿ ನೀಡಿದ್ದೆವು. ಸದರಿ ವರದಿಯಲ್ಲಿ ಪ್ರಭಾರಿ ಮುಖ್ಯ ಗುರುಗಳಾದ ಮಾಹಿತಿ ಅನುಸಾರ ವಾಸ್ತವ ವರದಿಯನ್ನು ನೀಡಿದ್ದೆವು. ರೂ.11,00,000/- ಆರೋಪಿತರ ಖಾತೆಗೆ ಜಮಾ ಆಗಿರುವ ಬಗ್ಗೆ ನಾನು ಕಣ್ಣಾರೆ ಕಂಡಿರುತ್ತೇನೆ. ನನಗೆ ಬ್ಯಾಂಕ್ ಖಾತೆ ಸಂಖ್ಯೆ ಹೇಳಲು ಬರುತ್ತದೆ. ಅದರ ಖಾತೆ ಕೊನೆಯ ಮೂರು ಸಂಖ್ಯೆ 563 ಇರುತ್ತದೆ. (ಸಾಕ್ಷಿಯು ಕೈಯಲ್ಲಿರುವ ಬರವಣಿಗೆಯನ್ನು ನೋಡಿ ನುಡಿಯುತ್ತಾರೆ.) ಚಾ ಸಾ 1 ರವರು ನಮಗೆ ಯಾವುದೇ ಆದೇಶ ಮಾಡಿಲ್ಲ ಎಂದರೆ ಸರಿಯಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆಯಲ್ಲಿ ಚಾ ಸಾ 1 ರವರು ನಮಗೆ ಮೌಖಿಕವಾಗಿ ಆದೇಶಮಾಡಿರುವ ಬಗ್ಗೆ ಹೇಳಿ ಬರೆಸಿಲ್ಲ ಎಂದರೆ ಸರಿಯಿಲ್ಲ. ನಾನು ಚಾ ಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಿಲ್ಲ. ಕೆ ಜಿ ಬಿ ಬ್ಯಾಂಕ್ ಖಾತೆಗೆ ರೂ.11,00,000/- ಜಮಾ ಆಗಿರುವ ಬಗ್ಗೆ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ರೂ.4,00,000/- ಕೆಲಸ ಮಾಡಿ ಇನ್ನೂಳಿದ ರೂ.6,00,000/- ಗಳನ್ನು ಗೋಲ್ ಮಾಲ್ ಮಾಡಿರುವ ಬಗ್ಗೆ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**